

# ‘ಹಿಟ್–ಫ್ಲಾಪ್’ ವಿಮರ್ಶೆಯಲ್ಲಿ ಗಣೇಶ್

ಈಚೆಗೆ ತೆರೆಕಂಡು 50 ದಿನಗಳನ್ನು ಪೂರೈಸಿರುವ ‘ಕೃಷ್ಣಂ ಪ್ರಣಯ ಸಖಿ’ ಸಿನಿಮಾ ಪ್ರೇಕ್ಷಕರನ್ನು ಸ್ವಲ್ಪ ಮಟ್ಟಿಗೆ ಥಿಯೇಟರ್‌ಗೆ ಕರೆತಂದ ಚಿತ್ರ ಕೂಡ ಹೌದು.

‘ಕೃಷ್ಣಂ ಪ್ರಣಯ ಸಖಿ’ ಐವತ್ತು ದಿನಗಳನ್ನು ಪೂರೈಸಿರುವ ಬಗ್ಗೆ ಸಂತಸ ಹಂಚಿಕೊಂಡಿರುವ ನಟ ಗಣೇಶ್, ‘ಈ ದಿನಗಳಲ್ಲಿ ಒಂದು ಸಿನಿಮಾ 50 ದಿನಗಳನ್ನು ಮುಟ್ಟುವುದೇ ಅಪರೂಪ. ಈ ಯಶಸ್ವಿ ಸಿನಿಮಾದ ಭಾಗವಾಗಿರುವುದಕ್ಕೆ ಸಂತೋಷವಾಗುತ್ತಿದೆ’ ಎಂದಿದ್ದಾರೆ. ಜೊತೆಗೆ ಸಿನಿಮಾರಂಗದ ಕೆಲವು ಸಂಗತಿಗಳ ಬಗ್ಗೆಯೂ ಮಾತನಾಡಿದ್ದಾರೆ.

‘ಸಿನಿಮಾದ ಗುಣಮಟ್ಟ ತುಂಬಾ ಮುಖ್ಯ. ಒಂದು ಸಿನಿಮಾ, ಜನರಿಗೆ ಥಿಯೇಟ್ರಿಕಲ್ ಅನುಭವ ಕಟ್ಟಿಕೊಡಬೇಕು. ಆ ಅನುಭವವನ್ನು ನೀಡದಿದ್ದ ಮೇಲೆ ಜನರೇಕೆ ಥಿಯೇಟರ್‌ಗೆ ಬಂದು ಸಿನಿಮಾ ನೋಡಬೇಕು?’ ಎಂದಿದ್ದಾರೆ.

‘‘ನಾನು ಯಾವುದೇ ಸ್ಕ್ರಿಪ್ಟ್ ಕೇಳುವಾಗ ಆ ಸಿನಿಮಾ ಒಪ್ಪಲು ಪ್ರೇರಣೆಯಾಗುವಂಥ ಒಂದು ಸ್ಪಾರ್ಕ್ ಕಥೆಯಲ್ಲಿರಬೇಕು ಎಂದು ಬಯಸುತ್ತೇನೆ. ‘ಕೃಷ್ಣಂ ಪ್ರಣಯ ಸಖಿ’ಯಲ್ಲಿಯೂ ಅಂಥ ಆಸಕ್ತಿದಾಯಕ ಅಂಶವಿದ್ದು, ಜನರನ್ನು ಕಥೆಯಲ್ಲಿ ತೊಡಗಿಕೊಳ್ಳುವಂತೆ ಪ್ರೇರೇಪಿಸಿತು. ಸಿನಿಮಾದಲ್ಲಿ ಪ್ರೇಕ್ಷಕ ಎಂಗೇಜ್ ಆಗುವಂತೆ ಮಾಡುವುದೇ ತುಂಬಾ ಮುಖ್ಯ, ಕಥೆ ಮತ್ತು ಜನರ ನಡುವೆ ಒಂದು ಜಾದೂ ಸೃಷ್ಟಿಯಾಗಲು ಇದುವೇ ಕಾರಣ’’ ಎಂದು ಹೇಳಿದ್ದಾರೆ.

ಸಿನಿಮಾ ಫಲಿತಾಂಶದ ಬಗ್ಗೆ ಮಾತನಾಡುತ್ತಾ, ‘ಹಿಟ್ ಹಾಗೂ ಫ್ಲಾಪ್ ಎನ್ನುವುದು ಕಲಾವಿದರ ಬದುಕಿನ ಒಂದು ಭಾಗ. ಯಾರೂ ಕೆಟ್ಟ ಸಿನಿಮಾ ಮಾಡಬೇಕು ಎಂದು ಮಾಡುವುದಿಲ್ಲ. ಪ್ರತಿಯೊಬ್ಬರಿಗೂ ಸಿನಿಮಾ ಚೆನ್ನಾಗಿ ಮಾಡಬೇಕೆಂಬ ಆಲೋಚನೆಯೇ ಇರುತ್ತದೆ. ಕೆಲವೊಮ್ಮೆ ಅದು ಗೆಲ್ಲುತ್ತದೆ, ಕೆಲವೊಮ್ಮೆ ಆಗುವುದಿಲ್ಲ. ಆದರೆ ಎಲ್ಲವನ್ನೂ ಸಮಾನವಾಗಿ ಸ್ವೀಕರಿಸಬೇಕು’ ಎಂದು ಸೋಲು–ಗೆಲುವಿನ ವಿಮರ್ಶೆ ಮಾಡಿದ್ದಾರೆ. ■



# ಸಂಚಾರದ ‘ಗೋಚರ’

‘ಗಂಟುಮೂಟೆ’ ಎಂಬ ಭಿನ್ನ ಧಾಟಿಯ ಸಿನಿಮಾ ನಿರ್ದೇಶಿಸುವ ಮೂಲಕ ಕನ್ನಡ ಸಿನಿಮಾರಂಗದಲ್ಲಿ ಹೊಸತನವನ್ನು ಪ್ರಯೋಗಿಸಿದ್ದ ರೂಪಾರಾವ್, ‘ಗೋಚರ’ ಸಿನಿಮಾ ಮೂಲಕ ಮತ್ತೆ ನಿರ್ದೇಶನದತ್ತ ಮರಳಿದ್ದಾರೆ.

ರೂಪಾರಾವ್ ಮತ್ತು ಸಹದೇವ್ ಕೆಳವಡಿ ಅವರು ಒಟ್ಟಾಗಿ ನಿರ್ಮಿಸುತ್ತಿರುವ ಈ ಸಿನಿಮಾದ ಪೋಸ್ಟರ್ ಈಚೆಗೆ ಬಿಡುಗಡೆಗೊಂಡಿದ್ದು, ಈ ಸಿನಿಮಾ, ‘ಗಂಟುಮೂಟೆ’ಯ ಮುಂದುವರಿದ ಭಾಗವೇ ಎಂಬ ಪ್ರಶ್ನೆ ಹುಟ್ಟುಹಾಕಿದೆ. ಹುಡುಗಿ, ರೈಲು, ‘ಗಂಟುಮೂಟೆ–2’ ಎಂಬ ಸಾಲು ಹೊಂದಿರುವ ಬೆಂಚು... ಇವುಗಳನ್ನು ಹೊಂದಿರುವ ಚಿತ್ರದ ಪೋಸ್ಟರ್ ಮತ್ತೊಂದು ಸೃಜನಶೀಲ ಸಿನಿಮಾ ಬರುವ ಸೂಚನೆಯಂತೆಯೂ ಕಾಣುತ್ತಿದೆ.

‘ಇದು ಬೇರೆಯದೇ ಕಥೆ. ಇದೊಂದು ಟ್ರಾವೆಲ್ ಕಥೆಯನ್ನು ಹೇಳುವ ಸಿನಿಮಾ. ಶೀಘ್ರದಲ್ಲಿಯೇ ಚಿತ್ರೀಕರಣ ಪ್ರಾರಂಭವಾಗಲಿದೆ’ ಎಂದು ಮಾಹಿತಿ ನೀಡಿದೆ ಚಿತ್ರತಂಡ. ■



# ವಿಜಯ್ – ವಿನಯ್ ಜೋಡಿ, ಕಮಾಲ್ ಮಾಡಲು ರೆಡಿ

ನಟ, ನಿರ್ದೇಶಕ ದುನಿಯಾ ವಿಜಯ್ ಹಾಗೂ ನಟ ವಿನಯ್ ರಾಜಕುಮಾರ್ ಕಾಂಬಿನೇಷನ್‌ನಲ್ಲಿ ಹೊಸ ಸಿನಿಮಾ ಮೂಡಿಬರುತ್ತಿದ್ದು, ಈ ಜೋಡಿ ಹೊಸ ನಿರೀಕ್ಷೆಯನ್ನು ಹುಟ್ಟುಹಾಕಿದೆ. ದುನಿಯಾ ವಿಜಯ್ ಪುತ್ರಿ ಮೋನಿಷಾ ನಟಿಸುತ್ತಿರುವ ಚೊಚ್ಚಲ ಸಿನಿಮಾ ಕೂಡ ಇದಾಗಿದೆ.

‘ಭೀಮ’ ಸಿನಿಮಾದ ಯಶಸ್ಸಿನ ಬೆನ್ನಲ್ಲೇ ವಿಜಯ್ ಮತ್ತೊಂದು ಸಿನಿಮಾ ನಿರ್ದೇಶನಕ್ಕೆ ಸಜ್ಜಾಗಿದ್ದು, ತಮ್ಮ ನಿರ್ದೇಶನದ ಈ ಮೂರನೇ ಚಿತ್ರಕ್ಕೆ ವಿನಯ್ ರಾಜಕುಮಾರ್ ಅವರನ್ನು ನಾಯಕ ನಟನಾಗಿ ಮಾಡಿದ್ದಾರೆ.

‘ಸಿಟಿ ಲೈಟ್ಸ್’ ಎಂಬ ಶೀರ್ಷಿಕೆಯನ್ನು ಸಿನಿಮಾಗೆ ಇಡಲಾಗಿದ್ದು, ‘ಜವಾಬ್ ದಾರಿ... ದೀಪಗಳು’ ಎಂಬ ಅಡಿಬರಹ ಕುತೂಹಲ ಕೆರಳಿಸಿದೆ. ಈಚೆಗೆ ಬಿಡುಗಡೆಗೊಳಿಸಿರುವ ಪೋಸ್ಟರ್ ಕೂಡ ನಿರೀಕ್ಷೆಯನ್ನು ಹೆಚ್ಚು ಮಾಡಿದೆ. ‘ಸಲಗ’ ಮತ್ತು ‘ಭೀಮ’ದಂಥ ಮಾಸ್ ಸಿನಿಮಾಗಳ ಬಳಿಕ ವಿಜಯ್ ಯಾವ ರೀತಿಯ ಕಥೆಯನ್ನು ಸಿನಿಮಾ ಮಾಡಲಿದ್ದಾರೆ ಎನ್ನುವ ಕುತೂಹಲವೂ ಹೆಚ್ಚಾಗಿದೆ. ■

